# 'ಚಾರ್ಲಿ'ಯ ಭಾವುಕಲೋಕ ಅಭಿಮಾನದ ಅತಿರೇಕ



ಸಿನಿಮಾದೊಳಗಷ್ಟೇ ಅಲ್ಲ, ತೆರೆಯ ಆಚೆಗೂ ನಟಿಯರನ್ನು ನಾಯಕನ ಉಪಭೋಗದ ವಸ್ತುವನ್ನಾಗಿ ನೋಡುವ ದೃಷ್ಟಿ ಇಂದಿಗೂ ಬದಲಾಗಿಲ್ಲ. ಅದಕ್ಕೊಂದು ನಿದರ್ಶನವಾಗಿ ಕಿರಣ್‌ರಾಜ್ ನಿರ್ದೇಶನದ, ರಕ್ಷಿತ್ ಶೆಟ್ಟಿ ನಟಿಸಿ ನಿರ್ಮಿಸಿರುವ 'ಚಾರ್ಲಿ 777' ಚಿತ್ರಕ್ಕೆ ಕೆಲವು ಪ್ರೇಕ್ಷಕರು, ಮಾಧ್ಯಮದವರು ನೀಡುತ್ತಿರುವ ಸ್ಪಂದನವನ್ನು ಗಮನಿಸಬೇಕು.

ರಕ್ಷಿತ್ ಶೆಟ್ಟಿ ಮತ್ತು ರಶ್ಮಿಕಾ ಮಂದಣ್ಣ ಮದುವೆ ಮಾತುಕತೆಗಳು ನಡೆದು, ನಂತರ ಅದು ಮುರಿದು ಬಿದ್ದು, ಅವರಿಬ್ಬರೂ ತಮ್ಮ ತಮ್ಮ ದಾರಿಗಳಲ್ಲಿ ನಡೆಯತೊಡಗಿ ಯಾವ ಕಾಲವಾಯ್ತು. ಆ ಪ್ರಕರಣದಲ್ಲಿ, ಸೋಷಿಯಲ್ ಮೀಡಿಯಾ ಪುಂಡರು, ಅವರಿಗೆ ಯಾವ ರೀತಿಯೂ ಕಡಿಮೆ ಇಲ್ಲದ ಮಾಧ್ಯಮ ಕಲಿಗಳು, ರಶ್ಮಿಕಾ ಅವರನ್ನು ವಂಚಕಿಯಾಗಿ ಚಿತ್ರಿಸಿ ರಣಕೇಕೆ ಹಾಕಿದ್ದರು. ಅವೆಲ್ಲ ಘಟಿಸಿ ಹಲವಾರು ವರ್ಷಗಳೇ ಕಳೆದು ಹೋದರೂ ಜನರ ಮನಸ್ಥಿತಿ ಮಾತ್ರ ಕೊಂಚವೂ ಬದಲಾಗಿಲ್ಲ. ಈಗ 'ಚಾರ್ಲಿ 777' ಸಿನಿಮಾ ಬಿಡುಗಡೆ ಸಂದರ್ಭದಲ್ಲಿಯೂ ಅನಗತ್ಯವಾಗಿ ರಕ್ಷಿತ್ – ರಶ್ಮಿಕಾ ಪ್ರಕರಣವನ್ನು ಮತ್ತೆ ಎಳೆದು ತರಲಾಗುತ್ತಿದೆ. ಯಾವುದೋ ವಿವೇಕಹೀನ ಹುಡುಗನೊಬ್ಬ ಸಿನಿಮಾ ನೋಡಿಬಂದು, ''ಕಿರಿಕ್ ಪಾರ್ಟಿ' ಸಿನಿಮಾದಲ್ಲಿ ರಕ್ಷಿತ್ ನಿಯತ್ತಿಲ್ಲದ ನಾಯಿಯನ್ನು ಹಾಕಿಕೊಂಡು ಸಿನಿಮಾ ಮಾಡಿದ್ದರು; ಇಲ್ಲಿ ನಿಯತ್ತಿರುವ ನಾಯಿಯನ್ನು ಹಾಕಿಕೊಂಡು ಸಿನಿಮಾ ಮಾಡಿದ್ದಾರೆ'' ಎಂಬರ್ಥದ ಮಾತನ್ನು ಆಡಿದ್ದಾನೆ. ಆ ವಿಡಿಯೊ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಹತ್ತು ಹಲವು ಯೂಟ್ಯೂಬ್ ಚಾನಲ್‌ಗಳಿಗೆ ಒಪ್ಪೊತ್ತಿನ ಆಹಾರವಾಗಿದ್ದು, ನಮ್ಮ ಇಡೀ ಸಮಾಜದ ರೋಗಿಷ್ಠ ಮನಸ್ಥಿತಿಯನ್ನು ತೋರಿಸುತ್ತದೆಯೇ ವಿನಾ ಇನ್ನೇನೂ ಅಲ್ಲ.

ಪ್ರೇಮದಲ್ಲಿ, ಸಂಸಾರದಲ್ಲಿ ನಿಯತ್ತು ಎನ್ನುವುದು ಹೆಣ್ಣಿಗೆ ಮಾತ್ರ ಇರಬೇಕಾಗಿದ್ದು ಎಂಬ ಮನಸ್ಥಿತಿ ಮಾತ್ರವೇ ಇಂಥ ಮಾತನ್ನು ಆಡಿಸಬಲ್ಲದು. ಹೆಣ್ಣುಮಕ್ಕಳಿಗೆ ಸ್ವತಂತ್ರ ವ್ಯಕ್ತಿತ್ವ, ಸ್ವಂತ ಆಯ್ಕೆಗಳು ಇರುವುದಿಲ್ಲ ಎಂಬ ಮೌಢ್ಯದಲ್ಲಿ ಮುಳುಗಿರುವ ವ್ಯಕ್ತಿಗಳಷ್ಟೇ ಇಂಥ ಮಾತುಗಳನ್ನು ಸಂಭ್ರಮಿಸಬಲ್ಲರು. ಹಾಗೆ ನೋಡಿದರೆ ರಶ್ಮಿಕಾ ಅವರ ಯಶಸ್ಸೇ ಇವರೆಲ್ಲರ ಬಾಯಿಗೆ ಬೆಣೆ ಜಡಿಯಬೇಕಾಗಿತ್ತು. ಆದರೆ ಅದನ್ನು ಗಮನಿಸುವ

# ಹೊಂಬಾಳೆ ವಿಜಯಯಾತ್ರೆ



**2014**ರಲ್ಲಿ ಪುನೀತ್ ರಾಜ್‌ಕುಮಾರ್ ಅಭಿನಯದ 'ನಿನ್ನಿಂದಲೇ' ಸಿನಿಮಾ ತೆರೆಕಂಡಿತ್ತು. ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಸದ್ದೇನೂ ಮಾಡದೆ ಮರೆಯಾದ ಈ ಸಿನಿಮಾದ ನಿರ್ಮಾಣ ಮಾಡಿದ್ದು 'ಹೊಂಬಾಳೆ ಫಿಲ್ಮ್ಸ್'. ವಿಜಯ್ ಕಿರಗಂದೂರು ಎಂಬ ವ್ಯಕ್ತಿಯಾಗಲಿ, ಈ ನಿರ್ಮಾಣ ಸಂಸ್ಥೆಯ ಹೆಸರಾಗಲಿ ಆಗ ಚಿತ್ರರಂಗಕ್ಕೆ ಪರಿಚಿತ ಆಗಿರಲಿಲ್ಲ. 'ಹೀಗೆ ಬಂದು ಹಾಗೆ ಹೋಗುವ ಮಂದಿ' ಎಂದೇ ಅವರನ್ನು ಬಹುತೇಕರು ನೋಡಿದ್ದು.

ಆದರೆ ಕಳೆದ ಎಂಟು ವರ್ಷಗಳಲ್ಲಿ ಚಂದನವನದಲ್ಲಿ ಹಲವು ಸಲ ಜೋರು ಮಳೆಗಾಳಿ ಬೀಸಿದೆ; ನೆಲ ನಡುಗಿದೆ. ಹಲವು ಸಲ ಭಾರತೀಯ ಚಿತ್ರರಂಗ ಇತ್ತ ಹೊರಳಿ ನೋಡಿದೆ ಮತ್ತು ಅಂಥ 'ಗೇಮ್ ಚೇಂಜರ್' ಅನಿಸಿಕೊಂಡ ಹಲವು ಆಟಗಳಲ್ಲಿ 'ಹೊಂಬಾಳೆ ಫಿಲ್ಮ್ಸ್' ಹೆಸರಿದೆ!

ಹೊಂಬಾಳೆ ಫಿಲ್ಮ್ಸ್ ನಿರ್ಮಾಣದ ಎರಡನೇ ಸಿನಿಮಾದ ಹೆಸರು, 'ಮಾಸ್ಟರ್ ಪೀಸ್'. ಯಶ್ ಈ ಸಂಸ್ಥೆಯ ಜೊತೆಗೆ ಕೈಜೋಡಿಸಿದ್ದೂ ಇದೇ ಸಿನಿಮಾದಲ್ಲಿ. ಹಾಗೆ ನೋಡಿದರೆ ಈ ಸಂಸ್ಥೆಯ ವ್ಯವಹಾರಿಕವಾದ ದೊಡ್ಡ ಜಿಗಿತಕ್ಕೆ ಕಾರಣವಾದ ಮಾಸ್ಟರ್ ಪೀಸ್ 'ಕೆ.ಜಿ.ಎಫ್.'. ಇದರಲ್ಲಿಯೂ ಜೊತೆಯಾಗಿದ್ದು ಯಶ್ ಅವರೇ. ಯಶ್ ಅವರೇ ನಾಯಕನಾಗಿ ನಟಿಸಿದ ಸಂತೋಷ್ ಆನಂದ್‌ರಾಮ್ ನಿರ್ದೇಶನದ 'ರಾಮಾಚಾರಿ' ಸಿನಿಮಾದ ಭರ್ಜರಿ ಯಶಸ್ಸು, ಹೊಂಬಾಳೆಯ ಬೇರನ್ನು ಇನ್ನಷ್ಟು ಆಳಕ್ಕೆ ಇಳಿಸಿತು ಮತ್ತು ಬಾಲಿವುಡ್ ಆಗಸದಲ್ಲಿ ತಮ್ಮ ಗುರುತಿನ ನಕ್ಷತ್ರ ನೆಡುವ ಆತ್ಮವಿಶ್ವಾಸವನ್ನು ಕೊಟ್ಟಿದ್ದೂ ಈ ಯಶಸ್ಸೇ ಇರಬೇಕು.

ಪ್ರಶಾಂತ್ ನೀಲ್ ನಿರ್ದೇಶನದ 'ಕೆ.ಜಿ.ಎಫ್.', ಬಹುಭಾಷೆಯ ಬಯಲಿಗೆ ದಾಂಗುಡಿಯಿಟ್ಟು,